"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮ ಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ".

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲ್ಪಟ್ಟಿತು).

ಪ್ರಸ್ತಾವದ ಅಂಗೀಕಾರ

ಶ್ರೀ ಡಿ.ಹೆಚ್. ಶಂಕರಮೂರ್ತಿ (ಉನ್ನತ ಶಿಕ್ಷಣ ಸಚಿವರು) : ಮಾನ್ಯ ಅಧ್ಯಕ್ಷರೆ, "2006ನೇ ಸಾಲಿನ ಕರ್ನಾಟಕ ವೃತ್ತಿ ಶಿಕ್ಷಣ ಸಂಸ್ಥೆಗಳ (ಪ್ರವೇಶ ನಿಯಂತ್ರಣ ಮತ್ತು ಶುಲ್ಕ ನಿಗದಿ) (ವಿಶೇಷ ಉಪಬಂಧಗಳು) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ."

ಅಧ್ಯಕ್ಷರು : ಪ್ರಸ್ತಾವ ಏನೆಂದರೆ,

"2006ನೇ ಸಾಲಿನ ಕರ್ನಾಟಕ ವೃತ್ತಿ ಶಿಕ್ಷಣ ಸಂಸ್ಥೆಗಳ (ಪ್ರವೇಶ ನಿಯಂತ್ರಣ ಮತ್ತು ಶುಲ್ಕ ನಿಗದಿ) (ವಿಶೇಷ ಉಪಬಂಧಗಳು) ವಿಧೇಯಕವನ್ನು ಅಂಗೀಕರಿಸುವುದು".

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

ಅಧ್ಯಕ್ಷರು : ಈಗ ಸಭೆಯನ್ನು ಭೋಜನ ಸಲುವಾಗಿ ಪುನಃ ಮಧ್ಯಾಹ್ನ 3–30 ಗಂಟೆ ವರೆಗೆ ಮುಂದೂಡುತ್ತಿದ್ದೇನೆ.

(ಸದನವು ಸಂಜೆ 5.55 ಗಂಟೆಗೆ ಸಮಾವೇಶಗೊಂಡಿತು)

(ಮಾನ್ಯ ಅಧ್ಯಕ್ಷರು (ಶ್ರೀ ಕೃಷ್ಣರವರು) ಅಧ್ಯಕ್ಷ ಪೀಠವನ್ನಲಂಕರಿಸಿದರು).

4. ವಿತ್ತೀಯ ಕಾರ್ಯಕಲಾಪಗಳು

2006–07ನೇ ಸಾಲಿನ ಅನುದಾನ ಬೇಡಿಕೆಗಳ ಮೇಲೆ ಮುಂದುವರಿದ ಚರ್ಚೆ

ಅಧ್ಯಕ್ಷರು : ಈಗ ಬೇಡಿಕೆಗಳನ್ನು ತೆಗೆದುಕೊಳ್ಳೋಣ. ರಾಮಸ್ವಾಮಿಯವರೇ ನಿಯಮ 69ರ ಮೇಲೆ ಮಾತನಾಡಿ.

ಶ್ರೀ ಎ.ಟಿ. ರಾಮಸ್ವಾಮಿ (ಅರಕಲಗೂಡು) : ಮಾನ್ಯ ಅಧ್ಯಕ್ಷರೇ, ವಿರೋಧ ಪಕ್ಷದಲ್ಲಿ ಮಾನ್ಯ ಸದಸ್ಯರೊಬ್ಬರೂ ಕೂಡ ಬಂದಿಲ್ಲ. ಹಾಗಾಗಿ ಸೋಮವಾರ ಚರ್ಚೆ ಮಾಡಲಿಕ್ಕೆ ಅವಕಾಶವನ್ನು ಮಾಡಿಕೊಟ್ಟರೆ ಒಳ್ಳೆಯದಾಗುತ್ತದೆ.

ಅಧ್ಯಕ್ಷರು : ಈಗ ಬೇಡಿಕೆಗಳ ಮೇಲೆ ಬಹಳ ಜನ ಮಾತನಾಡುವವರಿದ್ದಾರೆ.

ಶ್ರೀ ಹೆಚ್.ಡಿ. ಬಸವರಾಜು (ವಿರಾಜಪೇಟೆ) : ಮಾನ್ಯ ಅಧ್ಯಕ್ಷರೇ, ಈ ಒಂದು ಸದನಕ್ಕೆ ಏನೊಂದು ಗೌರವವನ್ನು ಕೊಡಬೇಕಾಗಿದೆಯೋ ಅದನ್ನು ಕೊಡುವಂಥ ಜವಾಬ್ದಾರಿಯನ್ನು

ಹೊತ್ತುಕೊಂಡು ಕ್ಷೇತ್ರಗಳಲ್ಲಿ ಇವತ್ತು ಮತ ಪಡೆದಿರುವಂತಹ ವ್ಯಕ್ತಿಗಳಿವರು, ಇವರಿಗೆ ಜವಾಬ್ದಾರಿಯಿಲ್ಲವೇ? ಇವರುಗಳು ಜವಾಬ್ದಾರಿಗಳ ಬಗ್ಗೆ ಬೇರೆಯವರಿಗೆ ಪ್ರತಿ ಸಂದರ್ಭದಲ್ಲೂ ಹೇಳಿಕೆ ಕೊಡುತ್ತಾರಲ್ಲಾ, ಆ ಜವಾಬ್ದಾರಿತನ ಎಲ್ಲಿ ಹೋಗಿದೆ? ಅದನ್ನು ನಾವು ಪ್ರಶ್ನೆ ಮಾಡಬೇಕಾಗುತ್ತದೆ.

ಅಧ್ಯಕ್ಷರು : ಬಸವರಾಜುರವರೇ, ಅದು ಅವರವರಿಗೆ ಬಿಟ್ಟಿದ್ದು. ಈಗ ಬೇಡಿಕೆಗಳ ಮೇಲೆ ಚರ್ಚೆ ಆರಂಭ ಮಾಡೋಣ. ತಾವು ಮಾತನಾಡಿ.

ಶ್ರೀ ಹೆಚ್.ಡಿ. ಬಸವರಾಜು (ವಿರಾಜಪೇಟೆ) : ಮಾನ್ಯ ಅಧ್ಯಕ್ಷರೇ, ಬಹುಶಃ ಇಂತಹ ಒಂದು ಪರಿಸ್ಥಿತಿಯಲ್ಲಿ ಬೇಡಿಕೆಯ ಮೇಲೆ ನಾನು ಮಾತನ್ನು ಆಡಲಿಕ್ಕೆ ಬಹಳ ಬೇಸರವಾಗುತ್ತದೆ. ಯಾರು ಜವಾಬ್ದಾರಿಯುತವಾಗಿ ಈ ಸರ್ಕಾರಕ್ಕೆ ಛಾಟಿ ಏಟನ್ನು ಮುಟ್ಟಿಸುವುದರ ಮೂಲಕ ಜನರ ಸಮಸ್ಯೆಯನ್ನು ನೀಗಿಸಬೇಕೆನ್ನುವಂತಹ ವಿಷಯವನ್ನು ಪ್ರಸ್ತಾಪ ಮಾಡಬೇಕಾಗಿದ್ದಂತಹ ವಿರೋಧ ಪಕ್ಷದವರು ಸದನದಲ್ಲಿ ಈಗ ಯಾರೂ ಇಲ್ಲ. ಆದರೂ ಕೂಡ ಇವತ್ತು ಸರ್ಕಾರದ ಸಾಧನೆಗಳನ್ನು ನಾನು ಹೇಳಲೇಬೇಕಾಗುತ್ತದೆ. ಬಹುಶಃ ಆ ನ್ಯೂನತೆಗಳ ಬಗ್ಗೆ ಕೆಲವರು ಮಾತನಾಡಿದ್ದಾರೆ. ಅಂತಹ ನ್ಯೂನತೆಗಳ ಬಗ್ಗೆ ಮಾತನಾಡುವಂಥ ಸಂದರ್ಭದಲ್ಲಿ ಒಂದಂಶವನ್ನು ಮರೆತರು. ಅದೇನೆಂದರೆ ಅವರೂ ಕೂಡ ಅಧಿಕಾರದಲ್ಲಿದ್ದರು. ಅಧಿಕಾರದ ರುಚಿಯನ್ನು ಅನುಭವಿಸಿದರು. ಆದರೆ ಆ ನ್ಯೂನತೆಗಳನ್ನು ತಾವು ಅಧಿಕಾರದಲ್ಲಿದ್ದಂಥ ಸಂದರ್ಭಗಳಲ್ಲಿ ಏತಕ್ಕೆ ತಿದ್ದಲಿಕ್ಕೆ ಅಥವಾ ಸರಿಪಡಿಸಲಿಕ್ಕೆ ಪ್ರಯತ್ನ ಮಾಡಲಿಲ್ಲವೆನ್ನತಕ್ಕಂಥ ಪ್ರಶ್ನೆಯನ್ನು ನಾವು ಕೇಳಬೇಕಾಗುತ್ತದೆ. ಏಕೆಂದರೆ ನ್ಯೂನತೆಯ ಬಗ್ಗೆ ಮಾತನಾಡಿ, ಮಾತನಾಡಿ ಚುಚ್ಚುವುದಲ್ಲ. ಆದರೆ ಅದೇ ಅಧಿಕಾರದಲ್ಲಿ ತಾವಿದ್ದಾಗ ಏನು ಮಾಡಿದರು ಎನ್ನುವಂಥದ್ದನ್ನು ಮತ್ತು ಸಲಹೆಗಳನ್ನು ಕೊಡುವಂತಹದ್ದನ್ನು ನಾವು ಮಾಡೋಣ. ಇವತ್ತು ಸರ್ಕಾರದಲ್ಲಿ ಏನು ಸಾಧನೆಯನ್ನು ಮಾಡಿದೆಯೆಂದು ನಾವು ಹೇಳಲೇಬೇಕಾಗುತ್ತದೆ. ಇವತ್ತು ಕೃಷಿಕ ವರ್ಗಕ್ಕೆ ಬಹುಶಃ ಹಿಂದೆ ಕೃಷಿ ಸಚಿವರಾಗಿದ್ದಂತಹ ಶ್ರೀನಿವಾಸಗೌಡರು ಇದ್ದಿದ್ದರೆ ನಾನು ಬಹಳಷ್ಟು ಸಂತೋಷ ಪಡುತ್ತಿದ್ದೆನು.

ಶ್ರೀ ಎ.ಟಿ. ರಾಮಸ್ವಾಮಿ (ಅರಕಲಗೂಡು) : ಮಾನ್ಯ ಅಧ್ಯಕ್ಷರೇ, ಇವರು ಮಾತನಾಡತಕ್ಕಂಥ ಸಂದರ್ಭದಲ್ಲಿ ವಿರೋಧ ಪಕ್ಷದ ನಾಯಕರುಗಳು ಅಥವಾ ಸದಸ್ಯರು ಸದನದಲ್ಲಿಲ್ಲ. ಈ ಸಂದರ್ಭದಲ್ಲಿ ಅವರು ಮಾತನಾಡಲಿಕ್ಕೆ ಆಸಕ್ತರಿದ್ದರೂ ಸಹ ಅದು ಅಷ್ಟೊಂದು ಸೂಕ್ತವಲ್ಲವೆಂಬುದು ನನ್ನ ಅಭಿಪ್ರಾಯವಾಗಿದೆ. ಸದನವನ್ನು ಸ್ವಲ್ಪ ಕಾಲ ಮುಂದೂಡಿ ತದನಂತರ ತಾವು ಸದನವನ್ನು ಸೇರಲಿಕ್ಕೆ ಅನುಮತಿಸಿದರೆ ಚೆನ್ನಾಗಿರುತ್ತದೆ ಹಾಗೂ ವಿರೋಧ ಪಕ್ಷದ ನಾಯಕರುಗಳನ್ನು ಕರೆಸಿ ಮಾತನಾಡಿದರೆ ಒಳ್ಳೆಯದಾಗುತ್ತದೆ ಎಂದು ನಾನು ಸಲಹೆ ಕೊಡಲಿಚ್ಛಿಸುತ್ತೇನೆ.

ಅಧ್ಯಕ್ಷರು : ಈಗ ಅರ್ಧಗಂಟೆ ಕಾಲ ಸದನವನ್ನು ಮುಂದೂಡಲಾಗಿದೆ.

(ಸದನವು 5.56 ಗಂಟೆಗೆ ಮುಂದೂಡಲ್ಪಟ್ಟು ಪುನಃ ಅರ್ಧ ಗಂಟೆಯ ನಂತರ ಸದನವು ಸೇರಲು ನಿರ್ಣಯಿಸಿತು).